

# ಸಿಂಹವನ್ನು ಹಿಡಿಯುವುದು ಹೇಗೆ?



ಸಿಂಹವನ್ನು ಹಿಡಿಯುವುದು ಕಷ್ಟ ಎಂದವರ್‍ಯಾರು? ಇದರಲ್ಲೂ ಹಲವಾರು ವಿಧಾನಗಳಿವೆ, ನಿಯಮಗಳಿವೆ. ಇಲ್ಲಿದೆ ವಿವರ..

**ನ್ಯೂಟನ್ ನಿಯಮ**

ಸಿಂಹವೇ ನಿಮ್ಮನ್ನು ಹಿಡಿಯಲಿ!

ಯಾಕೆಂದರೆ ಎಲ್ಲ ಕ್ರಿಯೆಗಳಿಗೂ ಪರ ಮತ್ತು ವಿರೋಧ ಅಂತ ಇರುತ್ತದೆ.

ಸಿಂಹವೇ ನಿಮ್ಮನ್ನು ಹಿಡಿದರೂ ನೀವೇ ಸಿಂಹವನ್ನು ಹಿಡಿದಂತೆ ತಾನೇ!

**ಐನ್‌ಸ್ಟೈನ್ ನಿಯಮ**

ಸಿಂಹಕ್ಕೆ ವಿರುದ್ಧ ದಿಕ್ಕಿನತ್ತ ಜೋರಾಗಿ ಓಡಿ!

ಹೆಚ್ಚಿನ ರಿಲೇಟೀವ್ ವೆಲಾಸಿಟಿಯಿಂದಾಗಿ ಸಿಂಹವೂ ಜೋರಾಗಿ ಓಡಿ ಬೇಗ ಸುಸ್ತಾಗುತ್ತದೆ.

ಆಗ ನೀವು ಅದನ್ನು ಹಿಡಿಯಬಹುದು

**ಇಂಡಿಯನ್ ಪೊಲೀಸ್ ನಿಯಮ**

ಸಿಂಹ ಸಿಗದೇ ಇದ್ದರೂ ಪರವಾಗಿಲ್ಲ. ಬೇರೆ ಯಾವುದಾದರೂ ಪ್ರಾಣಿಯನ್ನಾದರೂ ಹಿಡಿಯಿರಿ. ಆಮೇಲೆ ಅದಕ್ಕೆ ಚಿತ್ರಹಿಂಸೆ ಕೊಟ್ಟು ತಾನು ಸಿಂಹ ಅಂತ ಒಪ್ಪಿಕೊಳ್ಳುವಂತೆ ಮಾಡಿ!

**ರಜನೀಕಾಂತ್ ನಿಯಮ**

ನೀವು ಯಾವಾಗ ಬೇಕಾದರೂ ಒಂದು ಅಟ್ಯಾಕ್ ಮಾಡಬಹುದು... ಅಂತ ಸಿಂಹಕ್ಕೆ ಎಚ್ಚರಿಕೆ ಕೊಡುತ್ತಲೇ ಇರಿ. ಆಗ ಸಿಂಹ ಹೆದರಿಕೆಯಿಂದಲೇ ಇದ್ದು ಕಡೆಗೆ ಹೆದರಿಕೆಯಿಂದಲೇ ಸತ್ತು ಹೋಗುತ್ತದೆ!

**ಜಯಲಲಿತಾ ನಿಯಮ**

ಪೊಲೀಸ್ ಕಮೀಶನರ್‌ರನ್ನು ಅರ್ಧರಾತ್ರಿಯಲ್ಲಿ ಕಳುಹಿಸಿ, ಸಿಂಹ ನಿದ್ದೆ ಮಾಡುತ್ತಿರುವಾಗಲೇ ಅದನ್ನು ಬಂಧಿಸಿ.

**ಮಣಿರತ್ನಂ ನಿಯಮ**

ಸಿಂಹಕ್ಕೆ ಸೂರ್ಯನ ಬೆಳಕು ತಾಕದಂತೆ ಹಾಗೂ ಅದು ಕತ್ತಲೆಯಲ್ಲಿಯೇ ಇರುವಂತೆ ಮಾಡಿ. ಒಂದು ಮೇಣದ ಬತ್ತಿಯನ್ನು ಮಾತ್ರ ಹೊತ್ತಿಸಿ. ಅದರ ಕಿವಿಯಲ್ಲಿ ಏನಾದರೂ ಒಂದನ್ನು ಗೊಣಗುತ್ತಲೇ ಇರಿ. ಸಿಂಹಕ್ಕೆ ತುಂಬಾ ಬೇಜಾರಾಗಿ ಅದೇ ಆತ್ಮಹತ್ಯೆ ಮಾಡಿಕೊಂಡು ಬಿಡುತ್ತದೆ.

**ಕರಣ್ ಜೋಹರ್ ನಿಯಮ**

ಗಂಡು ಸಿಂಹ ಇದ್ದ ಕಾಡಿಗೆ ಒಂದು ಹೆಣ್ಣು ಸಿಂಹವನ್ನು ಕಳುಹಿಸಿ. ಎರಡೂ ಸಿಂಹಗಳು ಪ್ರಣಯದಲ್ಲಿ ಬೀಳುತ್ತವೆ. ಇನ್ನೂ ಒಂದು ಗಂಡು ಮತ್ತು ಒಂದು ಹೆಣ್ಣು ಸಿಂಹಗಳನ್ನು ಒಂದಾದ ಮೇಲೊಂದರಂತೆ ಕಳುಹಿಸಿ. ಮೊದಲೆರಡೂ ಸಿಂಹಗಳು, ಆಮೇಲಿನ ಎರಡೂ ಸಿಂಹಗಳು ಪರಸ್ಪರ ಪ್ರೀತಿಸಲಾರಂಭಿಸುತ್ತವೆ. ಆದರೆ ಎರಡನೇ ಹೆಣ್ಣು ಸಿಂಹ ಎರಡೂ ಗಂಡು ಸಿಂಹಗಳನ್ನು ಪ್ರೀತಿಸುತ್ತದೆ. ಆಗ ಮೂರನೇ ಹೆಣ್ಣು ಸಿಂಹವನ್ನು ಕಳುಹಿಸಿ. ಏನಾದರೂ ಗೊಂದಲವೇ. ಏನೂ ಅರ್ಥವಾಗಲಿಲ್ಲವೇ? ಪರವಾಗಿಲ್ಲ. ಇನ್ನು 15 ವರ್ಷ ಬಿಟ್ಟು ಓದಿ. ಆಗಲೂ ಏನೂ ಅರ್ಥವಾಗಲ್ಲ.

**ಯಶ್ ಛೋಪ್ರಾ ನಿಯಮ**

ಸಿಂಹವನ್ನು ಆಸ್ಟ್ರೇಲಿಯಾ ಅಥವಾ ಯು.ಎಸ್ ಗೆ ಕರೆದುಕೊಂಡು ಹೋಗಿ ಒಂದು ಒಳ್ಳೆಯ ಮನಮೋಹಕ ತಾಣದಲ್ಲಿ ಕೊಂದು ಬಿಡಿ.

**ಗೋವಿಂದನ ನಿಯಮ**

ಸಿಂಹದ ಮುಂದೆ ನಿರಂತರವಾಗಿ ಐದಾರು ದಿನ ಡ್ಯಾನ್ಸ್ ಮಾಡಿ. ಅದೇ ತನ್ನನ್ನು ಬಂಧಿಸಿ ಎಂದು ಸರೆಂಡರ್ ಆಗುತ್ತದೆ!

**ಮೇನಕಾ ಗಾಂಧಿ ನಿಯಮ**

ಸಿಂಹವನ್ನು ಯಾವುದಾದರೊಂದು ಅಪಾಯದಿಂದ ಪಾರು ಮಾಡಿ. ಅದಕ್ಕೆ ನಿರಂತರವಾಗಿ ತರಕಾರಿ, ಸೊಪ್ಪು ತಿನ್ನಿಸಿಕೊಂಡು ಬನ್ನಿ.

**ಜಾರ್ಜ್ ಬುಷ್ ನಿಯಮ**

ಸಿಂಹವನ್ನು ಒಸಾಮ ಬಿನ್ ಲಾಡೆನ್ ಅಂದುಕೊಂಡು ಷೂಟ್ ಮಾಡಿಬಿಡಿ.

**ರಾಹುಲ್ ಡ್ರಾವಿಡ್ ನಿಯಮ**

ಸಿಂಹಕ್ಕೆ ನಿಮಗೆ ಬೌಲಿಂಗ್ ಮಾಡಲು ಹೇಳಿ. 200 ಎಸೆತಗಳನ್ನು ಬ್ಯಾಟಿಂಗ್ ಮಾಡಿ, ಕೇವಲ ಒಂದು ರನ್ ಮಾತ್ರ ಮಾಡಿ. ಸಿಂಹ ಸುಸ್ತಾಗಿ ನೆಗೆದು ಬೀಳುತ್ತದೆ!

**ಸಾಫ್ಟ್‌ವೇರ್ ಎಂಜಿನಿಯರ್ ನಿಯಮ**

ಒಂದು ಬೆಕ್ಕನ್ನು ಹಿಡಿದು ನಿಮ್ಮ ಪರೀಕ್ಷೆಯಿಂದ 'ಅದು ಸಿಂಹ ಅಂತ ತಿಳಿದು ಬಂದಿದೆ' ಎಂದು ಪ್ರತಿಪಾದಿಸಿ.

ಯಾರಾದರೂ ಒಂದು ಏನಾದರೂ ಪ್ರಶ್ನೆ ಹಾಕಿದರೆ ಬೆಕ್ಕನ್ನೇ ಸಿಂಹವನ್ನಾಗಿ ಅಪ್‌ಗ್ರೇಡ್ ಮಾಡ್ತೀನಿ ಅಂತ ಹೇಳಿ.

ನೆಟ್‌ನಿಂದ ಹಾರಿಸಿದವರು:
**ಬೇಲೂರು ರಾಮಮೂರ್ತಿ**

